ರಾಜ್ಯದಲ್ಲಿ ಖಾಲಿ ಇರುವ ವೈದ್ಯಾಧಿಕಾರಿಗಳ ನೇಮಕಾತಿ.

1780(2435)

ಬಚ್ಚೇಗೌಡ ಬಿ.ಎಸ್.(ಹೊಸಕೋಟೆ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಆಸ್ಪತ್ರೆಗಳಲ್ಲಿ ಖಾಲಿ ಇರುವ ವೈದ್ಯಾಧಿಕಾರಿಗಳ ಹುದ್ದೆಗಳೆಷ್ಟು?

ಆ) ಖಾಲಿ ಇರುವ ಆಸ್ಪತ್ರೆಗಳಿಗೆ ವೈದ್ಯರುಗಳನ್ನು ನೇಮಕ ಮಾಡಲು ಏನಾದರೂ ನಿಯಮಗಳನ್ನು ರೂಪಿಸಲಾಗಿದೆಯೇ?

ಇ) ಈ ವೈದ್ಯರ ಪೈಕಿ ಎಂ.ಬಿ.ಬಿ.ಎಸ್. ವೈದ್ಯರು ಎಷ್ಟು? ಮತ್ತು ದಂತ ವೈದ್ಯರು ಎಷ್ಟು?

ಈ) ರಾಜ್ಯದಲ್ಲಿರುವ ಆರೋಗ್ಯ ಕೇಂದ್ರಗಳಲ್ಲಿ ಎಷ್ಟು ಜನ ಎ.ಎನ್.ಎಂ.ಗಳ ಕೊರತೆ ಇದೇ ಇದನ್ನು ತುಂಬಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)

ಡಾ.ಎ.ಬಿ.ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) 608

ಆ) ವಿಶೇಷ ಆಯ್ಕೆ ನಿಯಮಗಳನ್ನು ರಚಿಸಿದೆ.

ಇ) 550 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು, 80 ದಂತ ಆರೋಗ್ಯಾಧಿಕಾರಿಗಳ ಹುದ್ದೆಗಳಿಗೆ ಆಯ್ಕೆ ಪ್ರಕ್ರಿಯೆ ಜಾರಿಯಲ್ಲಿದೆ.

ಈ) 1388 ಹುದ್ದೆಗಳು ಖಾಲಿ ಇದೆ. 700 ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇರೆಗೆ ತುಂಬಲು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ. ಮತ್ತು ಉಳಿದ 688 ಹುದ್ದೆಗಳನ್ನು ಇಲಾಖೆಯಿಂದ ತರಬೇತಿ ಪಡೆದ ಅಭ್ಯರ್ಥಿಗಳನ್ನು ನೇಮಕ ಮಾಡುವ ಮೂಲಕ ತುಂಬಲಾಗುವುದು.

ರಾಜ್ಯದಲ್ಲಿನ ಟಿ.ಸಿ.ಹೆಚ್. ಕಾಲೇಜುಗಳ ಮಾಹಿತಿ.

1782(2437)

ಶ್ರೀ ಬಚ್ಚೇಗೌಡ ಬಿ.ಎನ್.(ಹೊಸಕೋಟೆ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ಟಿ.ಸಿ.ಹೆಚ್. ಕಾಲೇಜುಗಳೆಷ್ಟು; (ವಿವರ ನೀಡುವುದು)

ಆ) ಈ ಕಾಲೇಜುಗಳಲ್ಲಿ ಸರ್ಕಾರಿ, ಅನುದಾನ ಮತ್ತು ಅನುದಾನ ರಹಿತ ಕಾಲೇಜು ಎಷ್ಟು; (ವಿವರ ನೀಡುವುದು)

ಇ) ಈ ಕಾಲೇಜುಗಳಿಗೆ ವಿದ್ಯಾರ್ಥಿಗಳ ಪ್ರವೇಶ ಎಷ್ಟು; (ಇನ್‌ಟೇಕ್)

ಈ) 2001-02ನೇ ಸಾಲಿನಲ್ಲಿ ಹೊಸದಾಗಿ ಟಿ.ಸಿ.ಹೆಚ್. ಕಾಲೇಜನ್ನು ಪ್ರಾರಂಭಿಸಲು ಉದ್ದೇಶವಿದೆಯೇ; ಮತ್ತು ಟಿ.ಸಿ.ಹೆಚ್. ಮುಗಿಸಿರುವ ನಿರುದ್ಯೋಗಿಗಳ ಒಟ್ಟು ಸಂಖ್ಯೆ ಎಷ್ಟು;

ಉ) ಸರ್ಕಾರ ಈ ಆರ್ಥಿಕ ವರ್ಷದಲ್ಲಿ ಎಷ್ಟು ಜನ ಪ್ರಾಥಮಿಕ ಶಿಕ್ಷಣ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳಲು ಉದ್ದೇಶಿಸಲಾಗಿದೆ; ರೂಪುರೇಷೆಗಳೇನು? (ವಿವರ ನೀಡುವುದು)

ಶ್ರೀ ಹೆಚ್.ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) 131 (ವಿವರ ಅನುಬಂಧದಲ್ಲಿ ನೀಡಿದೆ)

ಆ) ರಾಜ್ಯದಲ್ಲಿ 37 ಸರ್ಕಾರಿ, 40 ಅನುದಾನಿತ ಹಾಗೂ 54 ಅನುದಾನ ರಹಿತ ಶಿಕ್ಷಕ ತರಬೇತಿ ಸಂಸ್ಥೆಗಳಿರುತ್ತವೆ (ವಿವರ ಅನುಬಂಧದಲ್ಲಿ ನೀಡಿದೆ)

ಇ) ಈ ಶಿಕ್ಷಕ ತರಬೇತಿ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ಪ್ರವೇಶದ ವಿವರ ಕೆಳಗಿನಂತಿದೆ:

ಸರ್ಕಾರಿ ಸಂಸ್ಥೆಗಳು	-	2140
ಅನುದಾನಿತ ಸಂಸ್ಥೆಗಳು	-	2130
ಅನುದಾನ ರಹಿತ ಸಂಸ್ಥೆಗಳು	-	3350
ಒಟ್ಟು	-	7620

ಈ) ಸರ್ಕಾರ ರಾಜ್ಯದಲ್ಲಿ ಹೊಸ ಶಿಕ್ಷಕ ತರಬೇತಿ ಸಂಸ್ಥೆಗಳನ್ನು ಪ್ರಾರಂಭಿಸಲು

ಅನುಮತಿ ನೀಡಲು ನಿರ್ಧರಿಸಿದ್ದು ಈ ಕುರಿತಂತೆ ಮಾರ್ಗಸೂಚಿಗಳನ್ನು ಸಿದ್ಧಪಡಿಸಲಾಗುತ್ತಿದೆ. ಉದ್ಯೋಗಕ್ಕಾಗಿ ನಿರುದ್ಯೋಗಿಗಳು ವಿವಿಧ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ 1 ಲಕ್ಷಕ್ಕೂ ಹೆಚ್ಚಿಗೆ ನೋಂದಾಯಿಸಿಕೊಂಡಿರುತ್ತಾರೆ.

ಙ) ಸರ್ಕಾರ ಈ ಆರ್ಥಿಕ ವರ್ಷದಲ್ಲಿ ಒಟ್ಟು 15,500 ಪ್ರಾಥಮಿಕ ಶಾಲಾ ಶಿಕ್ಷಕರನ್ನು ನೇಮಕಾತಿ ಮಾಡಲು ಉದ್ದೇಶಿದೆ. ಈ ನೇಮಕಾತಿಯಲ್ಲಿ ಮೀಸಲಾತಿ ಹಾಗೂ ಅರ್ಹತೆ ಜೊತೆಗೆ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆ ನಡೆಸಿ ಆಯ್ಕೆ ಮಾಡಲು ಉದ್ದೇಶಿಸಿದೆ.

Annexure

DETAILS OF TEACHERS TRAINING INSTITUTIONS IN THE STATE.

Sl. No.	DISTRICT	DIET	GOVT	AIDED	UN AIDED	TOTAL
1	BANGALORE URBAN	1	0	7	12	20
2	BANGALORE RURAL	1	0	0	4	5
3	CHITRADURGA	0	2	2	0	4
4	DAVANAGERE	1	0	1	0	2
5	KOLAR	1	0	1	13	15
6	SHIMOGA	1	1	1	0	3
7	TUMKUR	1	1	4	2	8
8	BAGALKOT	1	1	1	0	3
9	BELGAUM	1	0	5	5	11
10	BIJAPUR	0	1	2	0	3
11	DHARWAD	1	1	4	2	8
12	GADAG	0	0	1	0	1
13	HAVERI	0	0	0	1	1
14	UTTAR KANNADA	1	0	1	0	2
15	BELLARY	1	0	1	0	2

16	BIDAR	1	0	0	1	2
17	GULBARGA	1	3	0	3	7
18	KOPPAL	0	1	0	1	2
19	RAICHUR	1	1	0	0	2
20	CHAMARAJA NAGAR	0	0	0	1	1
21	CHIKMAGALUR	1	0	0	0	1
22	DAKSHINA KANNADA	1	1	3	0	5
23	HASSAN	1	0	0	3	4
24	KODAGU	1	0	0	2	3
25	MANDYA	1	2	1	1	5
26	MYSORE	1	1	4	3	9
27	UDUPI	0	1	1	0	2
	TOTAL	20	17	40	54	131